ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಸ್ವಾಮಿ, ಇದರಲ್ಲಿ ಮೂರನೇ ಒಂದು ಭಾಗ ಹರಿಜನರಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಮ್ಮ ಸಾಗರ ತಾಲ್ಲೂಕು ತೆಗೆದುಕೊಂಡರೆ ಮೂರನೇ ಒಂದು ಭಾಗ ಕೊಟ್ಟಿಲ್ಲ. ಈಗ ೧೪೭ ಜನ ಹರಿಜನರಿಗೆ ೨೬ ಜನ ಗಿರಿಜನರಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಒಟ್ಟು ಸಾಗರದಲ್ಲಿ ಎಷ್ಟು ವಿಲೇವಾರಿ ಆಯಿತು ತಿಳಿಸಬೇಕು. ಈಗ ಶಿವಮೊಗ್ಗ ಪ್ರಕಾರ ಮೂರನೇ ಒಂದು ಭಾಗ ಆಯಿತು. ಆದರೆ ಸಾಗರದಲ್ಲಿ ಮೂರನೇ ಒಂದು ಭಾಗ ಸಿಕ್ಕಿಲ್ಲ. ಇನ್ನು ಎರಡನೆಯದಾಗಿ ಹೇಳಬೇಕು ಅಂದರೆ ಸ್ಕೆಚ್ ಮಾಡುವಾಗ ಹರಿಜನರ ಅರ್ಜಿಗಳು ಇರುವುದಿಲ್ಲ. ಯಾರಿಗೆ ಶಕ್ತಿ ಇದೆ ಅವರು ಮಂಜೂರು ಮಾಡಿಸಿಕೊಳ್ಳುತ್ತಾರೆ, ಸರ್ವೆ ಆಫೀಸಿನಲ್ಲಿ ಕೆಲವು ಕಳೆದು ಹೋಗುತ್ತವೆ, ಫಾರೆಸ್ಟ್ ಆಫೀಸಿನಲ್ಲಿ ಕೆಲವು ಕಳೆದು ಹೋಗುತ್ತವೆ. ಯಾರಿಗೆ ಶಕ್ತಿ ಇದೆ ಅವರು ಅಲ್ಲಿ ಹೋಗಿ ಮಾಡಿಸಿಕೊಳ್ಳುತ್ತಾರೆ. ಆದುದರಿಂದ ಈ ದರಖಾಸ್ತು ಫಾರಂಗಳ ಬಗ್ಗೆ ಎಂಡಾರ್ಸ್‌ಮೆಂಟ್ ಕೊಡುವುದನ್ನು ಜಾರಿಗೆ ತರಬೇಕು. ಈಗ ನಮ್ಮ ಸಾಗರದಲ್ಲಿ ಮೂರನೇ ಒಂದು ಭಾಗ ಸಿಕ್ಕಿಲ್ಲ. ಅದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಾ? ಇನ್ನು ಸ್ಕೆಚ್‌ನಲ್ಲಿ ವ್ಯತ್ಯಾಸವಾಗಿ ಗುಡ್ಡುಗಾಡು ಜನರಿಗೆ ಒಳ್ಳೆಯ ಜಮೀನು ಸಿಕ್ಕುವಂತಾದ್ದು ತಪ್ಪಿಹೋಗುತ್ತದೆ ಆದಕ್ಕೆ ಏನು ವ್ಯವಸ್ಥೆ ಮಾಡುತ್ತೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯ ಸತ್ಯವಾಗಿದೆ, ಕಳೆದ ಮೂರು ವರ್ಷಗಳಲ್ಲಿ ಯಾರ್ಯಾರಿಗೆ ಈ ಕಾನೂನು ಬಾಹಿರವಾಗಿ ಮಾಡಿದ್ದೀರಿ ಅದನ್ನು ವಜಾ ಮಾಡಬೇಕೆಂದು ಪ್ರತಿಯೊಬ್ಬ ಜಿಲ್ಲಾಧಿಕಾರಿಗಳವರಿಗೂ ಆದೇಶವನ್ನು ಕಳುಹಿಸಿದ್ದೇವೆ. ಈಗ ನೀವು ಹೇಳುತ್ತಿರುವ ಪ್ರಕಾರ ಯಾರ್ಯಾರಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದಕ್ಕೆ ಹಾಗೂ ಇನ್ನು ಮುಂದೆ ಈ ರೀತಿ ಆಗದಿರುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

Underground Drainage Scheme at Davanagere City.

951 SRI. PAMPAPATHY (Davanagere)—Will the Minister for Municipal Administration be pleased to state:—

(a) whether it has come to the notice of the Government that there is no fullfledged underground drainage system in Davanagere City;

(b) if so, whether a scheme has been prepared by the Government for laying a fullfledged underground drainage system in Davanagere;

(c) the period required for completing this scheme;

(d) the steps taken by the Government so far in this regard?

SRI. H.C. SRIKANTAIAH—(Minister for Municipal Administration)

(a) Yes.

(b) Sanction has been accorded for the second stage of under ground drainage system for Davanagere City. The underground drainage work at a cost of 51.42 Lakhs is under progress.

(c) The scheme is expected to be completed by March, 1980.

(d) The work relating to laying of underground pipes in all parts of the city has come to the final stage. The work relating to the filter plant, residential quarters for staff and other related matters remains to be completed and the same is expected to be completed by March, 1980.

ಶ್ರೀ ಪಂಪಾಪತಿ —ಸ್ವಾಮಿ, ''ದಾವಣಗೆರೆ ನಗರದಲ್ಲಿ ಪೂರ್ಣ ಪ್ರಮಾಣದ ಒಳಚರಂಡಿಯ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ'', ಎಂಬ ನನ್ನ ಪ್ರಶ್ನೆಗೆ ತಾವು, ''ಸರ್ಕಾರದ ಗಮನಕ್ಕೆ ಬಂದಿದೆ'' ಎಂದು ಹೇಳಿದ್ದೀರಿ. ಕಳೆದ ೭-೮ ವರ್ಷಗಳ ಹಿಂದೆ ಪೈಪ್ ಹಾಕಿದ್ದಾರೆ ಆದರೆ ಡಿಸ್ಟ್ರಿಬ್ಯೂಷನ್ ಲೈನ್ ಹಾಕಿಲ್ಲ. ಇದನ್ನು ಕೂಡಲೇ ಮಾಡಿಸಿಕೊಡುತ್ತೀರಾ? ಇಲ್ಲದೇ ಹೋದರೆ ಈ ಚರಂಡಿ ವಾಸನೆ ದಾವಣಗೆರೆ ನಗರಕ್ಕೆಲ್ಲಾ ಸುತ್ತಿಕೊಂಡು ಬಹಳ ತೊಂದರೆಯಾಗುತ್ತದೆ.

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.— ಈಗಾಗಲೇ ಈ ಒಳಚರಂಡಿ ಕೆಲಸ ತ್ವರಿತವಾಗಿ ನಡೆಯುತ್ತಿದೆ. ತಾವು ಹೇಳಿದಂತೆ ಕೆಲವು ಕಡೆ ಸ್ಕೂರೇಜ್ ನೀರನ್ನು ಹೊರಕ್ಕೆ ಬಿಡುವ ಕೆಲಸ ಆಗಿಲ್ಲ ಎಂಬುದು ಗೊತ್ತಿದೆ. ಆದಷ್ಟು ಜಾಗ್ರತೆ ಈ ಕೆಲಸವನ್ನು ಮಾಡಿಸಿಕೊಡುತ್ತೇವೆ.

ಶ್ರೀ ಪಂಪಾಪತಿ.— ಸ್ವಾಮಿ, ದಾವಣಗೆರೆ ನಗರಕ್ಕೆ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಇದಕ್ಕಾಗಿ ಒಂದು ಕೆರೆಯನ್ನು ಕಟ್ಟುತ್ತಿದ್ದಾರೆ. ಆದರೆ ಛಾನಲ್‌ನಿಂದ ಈ ಕೆರೆಗೆ ನೀರನ್ನು ಬಿಟ್ಟುಕೊಂಡು ಈಗಲೇ ಸ್ಟಾಕ್ ಮಾಡಿಕೊಂಡರೆ ಮುಂದೆ ದಾವಣಗೆರೆ ನಾಗರೀಕರಿಗೆ ನೀರನ್ನೊದಗಿಸಲು ಅನುಕೂಲವಾಗುತ್ತದೆ. ಈ ಕೆಲಸವನ್ನು ತಾವು ಮಾಡಿಸಿಕೊಡುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ —ಈ ವಿಷಯವನ್ನು ಈ ಮೊದಲೇ ಒಂದು ಸಾರಿ ನನ್ನ ಗಮನಕ್ಕೆ ತಂದಿದ್ದಿರಿ. ಅಲ್ಲದೆ ನಾನೂ ಕೂಡ ಈ ಬಗ್ಗೆ ಆದೇಶ ಕೊಟ್ಟಿದ್ದೇನೆ. ಮತ್ತು ಛಾನಲ್‌ನಿಂದ ನೀರನ್ನು ಕೆರೆಗೆ ತುಂಬಿಸಿ ನೀರನ್ನು ನಿಲ್ಲಿಸುವ ವ್ಯವಸ್ಥೆ ಮಾಡೋಣ.

ಶ್ರೀ ಪಂಪಾಪತಿ.—ಸ್ವಾಮಿ, ಛಾನಲ್ ನೀರು ನಿಲ್ಲುವುದರೊಳಗೆ ಕೆರೆಯ ವ್ಯವಸ್ಥೆ ಆಗಬೇಕು ಇಲ್ಲದಿದ್ದರೆ ಮುಂದೆ ನಗರದ ನಾಗರೀಕರಿಗೆ ನೀರನ್ನೊದಗಿಸುವುದು ಕಷ್ಟವಾಗುತ್ತದೆ ಹಿಂದೆ ಒಂದು ಸಾರಿ ಒಂದು ಡ್ರಂ ನೀರಿಗೆ ೬ ರೂ. ಎಂದು ಮಾಡಿ ನಗರದ ಮರ್ಯಾದೆಯನ್ನು ಕಳೆದಿದ್ದಾರೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ದಾವಣಗೆರೆಯಲ್ಲಿ ನೀರಿನ ಕ್ಷಾಮವನ್ನು ನೀವೇ ಉಂಟುಮಾಡುತ್ತಿದ್ದೀರಿ. ನಿಮ್ಮಲ್ಲಿ ವರ್ಷದ ೧೧ ತಿಂಗಳೂ ಸಮೃದ್ಧವಾಗಿ ನೀರು ಇರುತ್ತದೆ. ಇನ್ನು ಒಂದು ತಿಂಗಳು ಮಾತ್ರ ಸ್ವಲ್ಪ ಕಷ್ಟವಾಗಬಹುದು. ಆದರೂ ನಿಮಗೆ ಆ ಒಂದು ತಿಂಗಳೂ ತೊಂದರೆಯಾಗದಂತೆ ವ್ಯವಸ್ಥೆ ಮಾಡಿಸುತ್ತೇವೆ.

Time bound programme for Completion of Hemavathy Project.

981 SRI. H. T. KRISHNAPPA (Nagamangala)—Will the Chief Minister be pleased to state :-

(a) whether the Government is having a time bound programme to complete the Hemavathy Project;

(b) what is the extent of the area in Nagamangala Taluk and other taluks of Mandya District planned to be brought under Irrigation?

SRI. D. DEVARAJ URS.(Chief Minister)—

(a) Yes, Hemavathy Project is proposed to completed by June 1989.

(b)

(a)	Nagamangala Taluk	97,000	Acres.
(b)	Krishnarajapet Taluk	54,440	,,
(c)	Mandya Taluk	32,000	,,
(d)	Pandavapura Taluk	42,000	,,
	Total :	2,25,440	Acres